ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು

ಸಿ.ಸಿ. ನಂ. **352/2024**

ಸಿ.ಡಬ್ಲ್ಯೂ: **1**
ಪಿ.ಡಬ್ಲ್ಯೂ: **1**

ದಿಃ **16.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ರಕ್ಷಿತ್ ಎನ್ |
| ತಂದೆ ಹೆಸರು | : | ಲೇಟ್ ನಾರಾಯಣಗೌಡ |
| ವಯಸ್ಸು | : | **41** ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ತಿಪಟೂರು |
| ವಾಸ ಸ್ಥಳ | : | ತಿಪಟೂರು |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನಾನು ವೈದ್ಯಾಧಿಕಾರಿಯಾಗಿದ್ದು ತಿಪಟೂರಿನಲ್ಲಿ ಒಂದು ಖಾಸಗಿ ಕ್ಲಿನಿಕ್ನ್ನುಕೂಡ ನಡೆಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಏನೂ ಗೊತ್ತಿಲ್ಲ. ಆರೋಪಿ ಈ ಹಿಂದೆ ನಗರ ಸಭೆಯ ಸದಸ್ಯರಾಗಿದ್ದು ಅವರ ಪರಿಚಯ ನನಗೆ ಮುಂಚಿನಿಂದಲೂ ಇದೆ. ಆತ ನನ್ನ ವಿರುದ್ದ ಯಾವುದೇ ಗಲಾಟೆಯನ್ನಾಗಲೀ ಅವಾಚ್ಯ ಶಬ್ದದಿಂದಾಗಿ ನಿಂದಿಸಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಒಂದು ದಿನ ರಾತ್ರಿ 9-30 ಗಂಟೆ ಸಮಯದಲ್ಲಿ ನಾನು ಕ್ಲಿನಿಕ್ ನಲ್ಲಿ ಚಿಕಿತ್ಸೆ ನೀಡುತ್ತಿದ್ದಾಗ ರೋಗಿಯ ಕಡೆಯ ಯಾರೋ 4-5 ಜನ ಒಳನುಗ್ಗಿ ಚಿಕಿತ್ಸೆ ಬೇಗ ನೀಡುತ್ತಿಲ್ಲವೆಂದು ಗಲಾಟೆ ಮಾಡುತ್ತಿದ್ದರು ಆ ಸಮಯದಲ್ಲಿ ಆರೋಪಿಯು ಅಲ್ಲಿದ್ದು ಒಳಗೆ ಬಂದು ಎಲ್ಲರನ್ನು ಸಮಾಧಾನ ಮಾಡಿ ಕಳುಹಿಸಿರುತ್ತಾರೆ. ಆ ಸಮಯದಲ್ಲಿ ಅವರು ಗಲಾಟೆ ಮಾಡುತ್ತಿದ್ದ ಜನರಿಗೂ, ನನಗೂ ಏರುಧ್ವನಿಯಲ್ಲಿ

ಬುದ್ಧಿಮಾತು ಹೇಳುತ್ತಾ ಪರಿಸ್ಥಿತಿಯನ್ನು ತಿಳಿಗೊಳಿಸಿದರೇ ಹೊರತು ಯಾವುದೇ ಕೆಟ್ಟ ಶಬ್ದದಿಂದ ನಿಂದಿಸಿಲ್ಲ. ನಾನು ಆರೋಪಿಯ ವಿರುದ್ಧ ಪೊಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-2 ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸದರಿ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ಪೊಲೀಸರಿಗೆ ನಾನು ಕ್ಲಿನಿಕ್ ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದ ಚಿತ್ರೀಕರಣದ ಪೆನ್ ಡ್ರೈವ್ ನ್ನು ನೀಡಿರುವುದಿಲ್ಲ. ಸಾಕ್ಷಿಯು ದಿಃ 12-02-2024  ಮತ್ತು ದಿಃ 24-01-2024 ರ 2 ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ನೋಟೀಸುಗಳನ್ನು ನಿಪಿ-4 ಮತ್ತು 5 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ಜಗಳವಾದ ಒಂದು ತಾಸಿನ ನಂತರ ಯಾರದೋ ಕರೆಯ ಮೇರೆಗೆ ಕ್ಲಿನಿಕ್ ಗೆ ಬಂದಿದ್ದ ಪೊಲೀಸರು ನಿಪಿ-1 ರಿಂದ 5ಕ್ಕೆ ನನ್ನ ಸಹಿ ಪಡೆದಿದ್ದಾರೆ. ನಿಪಿ-1 ರಿಂದ 5 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಪೊಲೀಸರು ಓದಿ ಹೇಳಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು**)**

<u>ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ-</u>

ದಿಃ 23-01-2024 ರ ರಾತ್ರಿ 9-30 ರ ಸಮಯದಲ್ಲಿ ನಾನು ಕ್ಲಿನಿಕ್ ನಲ್ಲಿದ್ದಾಗ ಈ ಕೇಸಿನ ಆರೋಪಿಯು ಕ್ಲಿನಿಕ್ ನ ಒಳಗೆ ನುಗ್ಗಿ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ ಹಿನ್ನಲೆಯಲ್ಲಿ ಈಗ ಓದಿಸಿ ಕೇಳಿಸಿಕೊಂಡ ನಿಪಿ-1 ರ ಪ್ರಕಾರ ಪೊಲೀಸರಿಗೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಂತರ ದಿಃ 24-01-2024 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿಕೊಟ್ಟ ಘಟನಾ

ಸ್ಥಳದ ಮಹಜರನ್ನು ಈಗ ಓದಿಸಿ ಕೇಳಿಸಿಕೊಂಡ ನಿಪಿ-2 ರ ಪ್ರಕಾರ ಜರುಗಿಸಿ ನನ್ನ ಸಹಿ ಪಡೆದು ನಿಪಿ-3 ರ ಪ್ರಕಾರ ಛಾಯಚಿತ್ರ ಪಡೆದರು ಎಂದರೆ ಸರಿಯಲ್ಲ. ಈಗ ಈಗ ಓದಿಸಿ ಕೇಳಿಸಿಕೊಂಡ ನಿಪಿ-4 ಮತ್ತು 5 ರ ಪ್ರಕಾರ ಪೊಲೀಸರುನನಗೆ ನೋಟೀಸು ನೀಡಿ ನನ್ನಿಂದ ಸಿಸಿಟಿವಿ ಚಿತ್ರೀಕರಣ ಮತ್ತು ಪೆನ್ ಡ್ರೈವ್ ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.